ಕೆಟ್ಟ ಬೆಳವಣಿಗೆಯ ಕಾಲಮಾನ ಇದು. ಹಿಂದೆಂದೂ ಇಲ್ಲದ ಮಟ್ಟಿಗೆ ಮನುಷ್ಯರನ್ನು ಒಡೆಯಲು, ಮನುಷ್ಯರ ಮೂಲಭೂತ ಅಗತ್ಯವನ್ನೇ ಬಳಸಿಕೊಳ್ಳುತ್ತಿರುವ ವಿಲಕ್ಷಣತೆಯ ಹಿನ್ನೆಲೆಯಲ್ಲಿ ಇದರ ಇತಿಹಾಸವನ್ನೇ ಈ ಕಥೆ, ಪುಣ್ಯಕೋಟಿ ಕಥೆಯ ರೂಪಕದ ಮೂಲಕ ಹೇಳಲು ಹವಣಿಸುತ್ತದೆ. ಹೊರಗಿನ ವೇಷಗಳನ್ನೆಲ್ಲ ಕಳಚಿ ಒಬ್ಬರು ಇನ್ನೊಬ್ಬರನ್ನು ಶುದ್ಧಗೊಳಿಸುವ ಪ್ರಕ್ರಿಯೆಯಂತೆ ಇಲ್ಲಿನ ಹುಲಿ ಮತ್ತು ಹಸುವಿನ ಮಾತುಕತೆಗಳಿವೆ. 'ನಿನ್ನ ಮೈಯಲ್ಲಿ ದೇವತೆಗಳಿದ್ದಾರೆ' ಎಂದು ಹುಲಿ ಹೇಳಿದರೆ, ಹಸು 'ನಿನ್ನಂಥ ದೇವತೆ ಮತ್ಯಾರು ಇರಲು ಸಾಧ್ಯ' ಎಂದು ಉದ್ಗರಿಸುತ್ತದೆ. ಇದಕ್ಕೆ ಅದು ಕೊಡುವ ಕಾರಣ ನಮ್ಮ ಅಂತಃಕರಣವನ್ನೇ ಕಲಕುತ್ತದೆ. 'ನೀನು ಹಸಿದಿರುವಾಗಲೂ ನನ್ನ ಮಗುವಿಗೆ ಅಮ್ಮನನ್ನು, ನನಗೆ ಕಂದನನ್ನು ಉಳಿಸಿಕೊಟ್ಟ ನೀನೇ ದೇವತೆ' ಎನ್ನುವ ಮೂಲಕ ಎಲ್ಲ ಜೀವಿಗಳ ಒಳಗೂ ಇರಬಹುದಾದ ಜೀವ ದಯಾಮೃತವನ್ನು ಗುಪ್ತನಿಧಿಯಂತೆ ಒಳಗಿರುವುದು ಅಗತ್ಯವಿದ್ದಾಗ ಹೊರ ಬರುವಂತೆ ಕಾಣಿಸುತ್ತದೆ. ಜೀವಸಂಕುಲವೆಲ್ಲವೂ ಈ ಅಮೃತವನ್ನು ತಮ್ಮೊಳಗಿನಿಂದ ಹೊರತಂದರೆ ಲೋಕವೇ ಅದೆಷ್ಟು ಸುಂದರವಾಗಿರಬಲ್ಲುದು ಎನ್ನುವ ಝಲಕ್ ಅನ್ನು ಈ ಮಾತುಗಳು ಕೊಡುತ್ತವೆ. ಇದು ಅಸಾಧ್ಯ ಎನ್ನುವುದು ಎಲ್ಲರಿಗೂ ಗೊತ್ತಿದೆ, ಆದರೆ ಯಾವಾಗಲಾದರೊಮ್ಮೆ ಅಪವಾದದಂತೆ ಕಾಣಿಸಿಕೊಳ್ಳುವ ಇವುಗಳೇ ನಮ್ಮ ಭರವಸೆಯ ಧಾತುಗಳು. ಕೊನೆಯ ಪಕ್ಷ ಒಬ್ಬರು ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನೂ ಮಾಡದೇ ಇರುವುದೇ ನರಕಕ್ಕೆ ಕಾರಣ ಎನ್ನುವುದನ್ನು ಇದು ಸೂಚಿಸುತ್ತದೆ. ಮೆಚ್ಚಬೇಕಾದ ಪರಮಾತ್ಮ ಎಲ್ಲೋ ಇರುವುದಲ್ಲ, ಮೆಚ್ಚಬೇಕಾದ ಪರಮಾತ್ಮ ನಮ್ಮ ಅಂತಃಕರಣ, ಸಾಕ್ಷಿಪ್ರಜ್ಞೆ ಎನ್ನುವುದನ್ನು ಈ ಕಥೆ ವಾಚ್ಯವಾಗಿಯೇ ಹೇಳುತ್ತದೆ.

'ಒಂಟಿ ನಕ್ಷತ್ರ ಗುಳೆ ಹೋದ ದಿವಸ' ಕಥೆಯು ಎಲ್ಲ ಹಳ್ಳಿಗಳಲ್ಲೂ ನಡೆಯಬಹುದಾದ, ಗಾಂಧಿ-ಅಂಬೇಡ್ಕರ್ ಎನ್ನುವ ಎರಡು ನಿಕಷಗಳು ಭಾರತೀಯ ಮನಸ್ಸನ್ನು ಬೇಕಾಗಿ ಬೇಡವಾಗಿ ಆವರಿಸಿರುವ ಪರಿಯನ್ನು ಹೇಳುತ್ತದೆ. ಶೋಷಕರು ಮತ್ತು ಶೋಷಿತರಿಬ್ಬರನ್ನೂ ಏಕಕಾಲದಲ್ಲಿ ಅಗ್ನಿಶಲಾಕೆಯಂತೆ ಪ್ರವೇಶಿಸುತ್ತಾರೆ ಈ ಇಬ್ಬರೂ ಮಹನೀಯರು. ಅವರ ಸ್ವಭಾವ, ವ್ಯವಸ್ಥೆಗಳ ಜೊತೆ ಈ ಇಬ್ಬರ ಪಟಗಳು ಜೀವಂತ ವ್ಯಕ್ತಿಗಳೋ ಎನ್ನುವಂತೆ ತಮ್ಮ ಅಸ್ತಿತ್ವವನ್ನು ಕಾಣಿಸುತ್ತಾ ಹೋಗುತ್ತಾರೆ. ಇದು ಸ್ವಲ್ಪ ಅತಿ, ಕೃತಕ ಎಂದು ಭಾಸವಾದರೂ ಈ ವ್ಯಕ್ತಿತ್ವಗಳು ಭಾರತೀಯ ಮನೋಭೂಮಿಕೆಯನ್ನು ಒಂದಲ್ಲ ಒಂದು ದಿನ ಹೀಗೆ ಆವರಿಸಲು ಸಾಧ್ಯವಿದೆ, ಸಾಧ್ಯವಾಗಲಿ ಎಂದು ಓದುಗರ ಮನಸ್ಸು ಆರ್ತವಾಗಿ ಪ್ರಾರ್ಥಿಸುತ್ತದೆ. ಸಾಹಿತ್ಯದ ವಿದ್ಯಾರ್ಥಿಯಾಗಿ ಇದನ್ನು ಅನುಮೋದಿಸುವುದು ತುಸು ಕಷ್ಟವೇ ಇರಬಹುದು. ಆದರೆ ಒಬ್ಬ ಪ್ರಜೆಯಾಗಿ ಇದನ್ನು ಅನುಮೋದಿಸುವ ಅವಕಾಶ ಖಂಡಿತಾ ಇದೆ.

'ಉಸಿರಿನ ಪರಿಮಳವಿರಲು...' ಕಥೆ ಪ್ರಿಯವಾಗುವುದು ಕೂಡ ಅದು ಒಡ್ಡುವ ತೀಕ್ಷ್ಣ ಪ್ರತಿರೋಧದ ಕಾರಣಕ್ಕೇ. ಹೆಣ್ಣನ್ನು ಹಣಿಯುವ ಯಾವ ಅವಕಾಶವನ್ನೂ ಬಿಟ್ಟುಕೊಡದ ಗಂಡಾಳಿಕೆಯ ಎದುರು ಅಮೃತಮತಿ, ತನ್ನನ್ನು ಬಹಿಷ್ಕರಿಸಿದ ಸಮಾಜದ ಎದುರು ಒಂದು ಉದ್ಯಾನವನ್ನು, ಕಲಾಶಾಲೆಯನ್ನು ಕಟ್ಟಿ ಆತ್ಮತೃಪ್ತಿಯಿಂದ ಬದುಕುವುದು, ತನ್ನ ಜೊತೆಯ ದೂತಿಗೂ ಅದನ್ನು ಮುಂದುವರೆಸುವಂತೆ ಹೇಳುವುದು, ಹೆಣ್ಣು ತನಗಾಗಿ ತಾನು ಬದುಕುವ ಸಾಧ್ಯತೆಯ ಅನಾವರಣವಾಗಿದೆ. ಒಲೆ ಬದಲಾದರೂ ಉರಿ ಬದಲಾಗದ ಹೆಣ್ಣಿನ ಅವಸ್ಥೆಯನ್ನು ಹೇಳುತ್ತಲೇ ಹೆಣ್ಣು ತನ್ನ ದಾರಿಯನ್ನು ತಾನು ಕಟ್ಟಿಕೊಳ್ಳುವುದೊಂದು ದಾರಿಯೇ ಹೊರತು ವ್ಯವಸ್ಥೆಯ ಕಡೆಯಿಂದ ಪರಿಹಾರ ಸಿಗದು ಎನ್ನುವುದನ್ನು ಈ ಕಥೆ ಸೂಚಿಸುತ್ತದೆ. ಕೊನೆಯಲ್ಲಿ ಹೆಣ್ಣುಮಕ್ಕಳಿಗೆ ಘೋಷಣೆಯಂತೆ, ಉದ್ಯಾನವನಗಳನ್ನು ಹೆಚ್ಚಿಸೋಣ ಎನ್ನುವ ಮಾತು ಹೆಣ್ಣಿನ ಅಂತರಂಗದ ದನಿಯಂತೆ ಕಾಣಿಸುತ್ತದೆ.

ಒಟ್ಟಾರೆಯಾಗಿ ಈ ಸಂಕಲನ 'ಕಾಲದ ದನಿ'ಯಾಗಿ ಆಪ್ತವಾಗುತ್ತದೆ. ಕಲ್ಲೂರು ಅವರು ತಮ್ಮ ಈ ಕಾಳಜಿಗಳನ್ನು ಹೀಗೇ ಕಾಪಿಟ್ಟುಕೊಳ್ಳುತ್ತಲೇ ಬರೆಯುವ ಅಸಲು ಕಸುಬಿನ ಕಡೆಗೆ ಇನ್ನಷ್ಟು ಗಮನ ಹರಿಸಿದರೆ ಕನ್ನಡಕ್ಕೆ ಅತ್ಯುತ್ತಮ ಕಥೆಗಾರ ಖಂಡಿತಾ ಸಿಗುತ್ತಾರೆ. ರಾಜಕೀಯ, ಸಾಮಾಜಿಕ ಕಾಳಜಿಯಾಗಿರುವ ಇಲ್ಲಿನ ವಸ್ತುಗಳು ಇನ್ನಷ್ಟು ಮಾಗುವಿಕೆಯಲ್ಲಿ ಕಲಾಪುಷ್ಪಗಳಾಗಿ ಅರಳಿಯಾವು. ಆ ಶಕ್ತಿ ಮತ್ತು ಆಸ್ಥೆ ಎರಡೂ ಗೋವಿಂದರಾಜ ಕಲ್ಲೂರ ಅವರಿಗೆ ಇದೆ.

●